ಊಟ ಮಾಡಿದ ನಂತರ ಕಾರು ಮತ್ತೆ ಹೊರಟಿತು. ಅಜ್ಜಿ ಕೋಳಿ ನಿದ್ದೆ ಮಾಡುತ್ತ, ದೊಡ್ಡದಾಗಿ ಗೊರಕೆ ಹೊಡೆಯುತ್ತ, ಆಗಾಗ ಎಚ್ಚರಗೊಂಡು ಕಿಟಕಿಯಲ್ಲಿ ಕಣ್ಣು ಹಾಸುತ್ತಿದ್ದಳು. ರಸ್ತೆ ಬಿಕೋ ಎನ್ನುತ್ತಿತ್ತು. ಅವಳು ನಡುವೆ ಒಂದು ಹಾಳು ಗದ್ದೆ ನೋಡಿ ಅಲ್ಲಿ ಹಿಂದೆ ದೊಡ್ಡ ತೋಟವೊಂದು ಇದ್ದದ್ದನ್ನು ನೆನಪಿಸಿಕೊಂಡಳು. ವಿಶಾಲವಾದ ಮನೆ ಕೂಡ ಇತ್ತು. ಮುಂದೆ ಓಕ್ ಮರಗಳಿದ್ದವು. ಪ್ರೇಮಿಗಳಿಬ್ಬರು ಅಡ್ಡಾಡಿ ಅಲ್ಲಿ ತೂಗಾಡುವ ಮರಹಲಗೆಯ ಮೇಲೆ ಕುಳಿತುಕೊಳ್ಳಬಹುದಿತ್ತು. ಆ ಮನೆಯಲ್ಲಿ ಇದ್ದ ಒಂದು ವಿಶಿಷ್ಟತೆಯನ್ನು ಮುದುಕಿ ನೆನಪು ಮಾಡಿಕೊಂಡಳು: 'ಆ ಮನಿಯೊಳಗ ಒಂದು ರಹಸ್ಯ ಕಪಾಟು ಇತ್ತು. ಅದರೊಳಗ ಕುಟುಂಬದ ಬೆಳ್ಳಿ ಬಂಗಾರ ಮುಚ್ಚಿಟ್ಟಿದ್ದರು. ಆಮ್ಯಾಲ ಅದರ ಪತ್ತೆ ಹಚ್ಚಾಕ ಆಗಲಿಲ್ಲ.'

ಹುಡುಗ ಜಾನ್ ವೆಸ್ಲೆ ಕುಳಿತಲ್ಲಿಂದ ಜಿಗಿಯುತ್ತ ಹೇಳಿದ: 'ಹಂಗಾದ್ರ ಅಜ್ಜಿ, ನಾವು ಅಲ್ಲಿಗೆ ಹೋಗಿ ಆ ಕಪಾಟು ಪತ್ತೆ ಹಚ್ಚೋಣು?'

ಪುಟ್ಟಿ ಸುಮ್ಮನಿದ್ದಾಳೆಯೇ? 'ಸಿಕ್ರೇಟ್ ಪ್ಯಾನಲ್ ಇದ್ದಂತಹ ಮನೀನ ನಾವು ಎಂದೂ ನೋಡಿಲ್ಲ. ಅಲ್ಲಿಗೆ ಹೋಗಾಕssಬೇಕು.'

'ಅದೇನು ಇಲ್ಲಿಂದ ಬಾಳ ದೂರ ಇಲ್ಲ. ಇಲ್ಲಿಂದ ಅಡ್ಡ ಹೋಗಿರೋ ರಸ್ತೆದೊಳಗ ಹೋದ್ರ ಬರೀ ಇಪ್ಪತು ನಿಮಿಷದೊಳಗ ಮುಟ್ಟತೇವಿ' ಅಜ್ಜಿ ಹೇಳಿದಳು.

